ಕರ್ನಾಟಕ ಸ್ಟೇಟ್ ವಕ್ಫ್ ಫೌಂಡೇಷನ್ ಫಾರ್ ವುಮೆನ್ ಡೆವಲಪ್‌ಮೆಂಟ್ ಫಲಾನುಭವಿಗಳು

278 (760) ಶ್ರೀ ಎ.ಎಂ. ಹಿಂಡಸಗೇರಿ (ಹುಬ್ಬಳ್ಳಿನಗರ):-

ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ಕರ್ನಾಟಕ ಸ್ಟೇಟ್ ವಕ್ಫ್ ಫೌಂಡೇಷನ್ ಫಾರ್ ವುಮೆನ್ ಡೆವಲಪ್‌ಮೆಂಟ್‌ಗೆ ಮೀಸಲಿಟ್ಟ ಹಣವನ್ನು ಫೌಂಡೇಷನ್ ಪಡೆದಿರುತ್ತದೆಯೇ;

ಬಿ) ಹಾಗಿದ್ದರೆ, 1992-93ನೇ ಸಾಲಿನ ಹಣವನ್ನು ಫಲಾನುಭವಿಗಳಿಗೆ ಬಿಡುಗಡೆ ಮಾಡಲಾಗಿದೆಯೇ;

ಸಿ) ಫಲಾನುಭವಿಗಳ ಸಂಖ್ಯೆ ಎಷ್ಟು (ದಯವಿಟ್ಟು ಹೆಸರುಗಳನ್ನು ನಮೂದಿಸುವುದು),

ಡಿ) ಒಟ್ಟು ಅನುದಾನ ಮತ್ತು ಬಿಡುಗಡೆ ಮಾಡಿದ ಹಣದ ಮೊತ್ತವೆಷ್ಟು ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು):-

ಎ) ಹೌದು.

ಬಿ) ಅರ್ಜಿಗಳನ್ನು ಪರಿಶೀಲಿಸಲಾಗುತ್ತಿದೆ.ಹಣವನ್ನು ಅದರಂತೆ ಬಿಡುಗಡೆ ಮಾಡಲಾಗುವುದು.

ಸಿ) ಉದ್ಭವಿಸುವುದಿಲ್ಲ.

ಡಿ) 1991-92ನೇ ಸಾಲಿನ ರೂ. 25 ಲಕ್ಷ ಹಾಗೂ 1992-93ನೇ ಸಾಲಿನ ರೂ. 25 ಲಕ್ಷ. ಈ ಹಣವನ್ನು ಬಿಡುಗಡೆ ಮಾಡಬೇಕಾಗಿರುತ್ತದೆ.

ಬೆಳಗಾವಿ ಜಿಲ್ಲೆಯಲ್ಲಿ ಪಶು ವೈದ್ಯಕೀಯ ಆಸ್ಪತ್ರೆಗಳ ಸಂಖ್ಯೆ

279 (441) ಉಮೇಶ ವಿ. ಕತ್ತಿ (ಹುಕ್ಕೇರಿ):-

ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯಲ್ಲಿ ಮಂಜೂರಾದ ಪಶುವೈದ್ಯಕೀಯ ಆಸ್ಪತ್ರೆಗಳೆಷ್ಟು ? (ತಾಲ್ಲೂಕುವಾರು ವಿವರ ಒದಗಿಸುವುದು);

ಆ) ಇನ್ನೂ ಮಂಜೂರಾಗಬೇಕಾದ ಆಸ್ಪತ್ರೆಗಳೆಷ್ಟು;

ಇ) ಈ ಪಶುವೈದ್ಯಕೀಯ ಆಸ್ಪತ್ರೆಗಳಲ್ಲಿ ಮಂಜೂರಾದ ಸಿಬ್ಬಂದಿ ಇದೆಯೇ ಹಾಗೂ ಖಾಲಿ ಇರುವ ಹುದ್ದೆಗಳೆಷ್ಟು ಮತ್ತು ಅವುಗಳ ನೇಮಕಾತಿ ಯಾವಾಗ ಮಾಡಲಾಗುವುದು;

ಈ) ಈ ಎಲ್ಲಾ ಪಶುವೈದ್ಯಕೀಯ ಆಸ್ಪತ್ರೆಗಳಿಗೆ ಔಷಧ ದಾಸ್ತಾನು ಇದೆಯೇ;

ಉ) ಇದಕ್ಕೆ ಸಾರ್ವಜನಿಕರಿಂದ ಹಣ ವಸೂಲಿ ಮಾಡಲಾಗುತ್ತಿದೆಯೇ ಇಲ್ಲವೆ ಉಚಿತವಾಗಿ ಸರಬರಾಜು ಮಾಡಲಾಗುತ್ತಿದೆಯೇ ?

ಶ್ರೀ ಕೆ.ಎನ್. ನಾಗೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು):-